# ಪರಂಪರೆ ಮತ್ತು ವೈಯಕ್ತಿಕತೆ

ಮನುಷ್ಯಜೀವವನ್ನು ಸೃಷ್ಟಿಪ್ರಕ್ರಿಯೆಯಲ್ಲಿ ಕೊನೆಯ ಮಜಲು, ಕೊನೆಯ ಸೃಷ್ಟಿ ಎಂದು ಎಲ್ಲ ಧರ್ಮಗಳೂ ಭಾವಿಸುತ್ತವೆ. ಈ ಭಾವನೆಗೆ ಧರ್ಮಗಳು ಹಚ್ಚುವ ಗಹನವಾದ ಅರ್ಥಗಳೇನೇ ಇರಲಿ– ಮನುಷ್ಯನೊಳಡೆ ಒಂದು 'ಶಿಶು' ಸದಾ ಇರುತ್ತದೆ. ಈ 'ಶಿಶು', ನಿದ್ದೆಯಲ್ಲೋ, ಎಚ್ಚರದಲ್ಲೋ, ಆಟವಾಡುತ್ತಲೋ ಹಟಮಾಡುತ್ತಲೋ ಇರುತ್ತದೆ. ಇದು ಮಡಿಲಲ್ಲಿ ಇರುವ ತನಕ ಇನ್ನೊಂದು 'ಶಿಶು' ಅಗತ್ಯವಿಲ್ಲ ಎಂದು ನಿಸರ್ಗ ತೀರ್ಮಾನಿಸಿದರೆ ತಪ್ಪಲ್ಲ. ಅಂದರೆ ಮನುಷ್ಯಜೀವಕ್ಕೆ ಎಲ್ಲ ಕಾಲಕ್ಕೂ ಲಾಲನೆ ಬೇಕಾಗಿದೆ. ಲಾಲನೆಯ ನೆನಪು ಬೇಕಿದೆ. ಲಾಲನೆಯ ಸ್ಮಾರಕಗಳು ಬೇಕಿವೆ.

ಆದರೆ ಕೈಗಾರಿಕಾಕ್ರಾಂತಿಯ ಅನಂತರದ ಜಗತ್ತು, ಲಾಲನೆಯ ಸ್ಮಾರಕಗಳಿಲ್ಲದ ಜಗತ್ತು ಎಂದು ಬಹುಜನ ಚಿಂತಕರು ಕಂಡುಕೊಂಡಿದ್ದಾರೆ. ಈ ಆಧುನಿಕಜಗತ್ತು ಅನಾಥಪ್ರಜ್ಞೆಯನ್ನು ತೀವ್ರವಾಗಿ ಮೂಡಿಸುವ, ಲಾಲನೆಯನ್ನು ಮರೆತುಬಿಟ್ಟ ಜಗತ್ತು. ಒರಟು ಜಗತ್ತು. ಪರಂಪರೆಯ ಬೇರು ಕಡಿದುಕೊಂಡ ಜಗತ್ತು. ಹೀಗೆ ಭಾವಿಸುವವರಲ್ಲಿ 'ಇವಾನ್ ಇಲಿಚ್' (Ivan Illich) ಒಬ್ಬ. 'Deschooling the society'ಎಂಬ ತನ್ನ ಪುಸ್ತಕದಿಂದ ಪ್ರಸಿದ್ಧನಾದವನು.

ಒಮ್ಮೆ 'ಇವಾನ್ ಇಲಿಚ್', ದಾರ್ಶನಿಕ ಜೆ. ಕೃಷ್ಣಮೂರ್ತಿಯವರನ್ನು ಭೆಟ್ಟಿಯಾದ. ಜೆ.ಕೆ, ಎಲ್ಲ ಪರಂಪರೆಗಳ ಹಂಗನ್ನು ಕಡಿದೊಗೆದವರು. ನಮ್ಮೆಲ್ಲ ಆಯ್ಕೆ; ಆಸಕ್ತಿಗಳನ್ನು ಮೀರಿದ ಎಚ್ಚರವೇ ಅಂದರೆ 'ಸರ್ವಸಂಗ ಪರಿತ್ಯಾಗ' ಎನ್ನುತ್ತಾರಲ್ಲ, ಅಂಥದೊಂದು ಸ್ಥಿತಿಯೇ ನಮ್ಮ ಪ್ರಜ್ಞೆಯ 'ತಿರುಳು' ಎಂದು ಭಾವಿಸುವವರು. ಆದುದರಿಂದಲೇ 'ಸತ್ಯ'ವನ್ನು ತಲುಪಲು ಯಾವುದೇ ದಾರಿಗಳಿಲ್ಲ; ಹಾಗೆ ದಾರಿಗಳನ್ನು ಕಡೆಯಲಾಗುವುದಿಲ್ಲ ಎನ್ನುವವರು. ಈ ದಾರಿಯಲ್ಲಿ ನಾನು 'ಸತ್ಯ'ವನ್ನು ತಲುಪಿದೆ; ತಲುಪಬಲ್ಲೆ ಎನ್ನುವ ಮಾತೇ ನಮ್ಮ ಕಲ್ಪನೆಗೆ 'ಸತ್ಯ'ವನ್ನು ಒಗ್ಗಿಸಿದಂತೆ. 'ಸತ್ಯ'ವು ನಮ್ಮ ಕಲ್ಪನೆಯಲ್ಲ ಎಂದು ದೃಢವಾಗಿ ಸಾರುವವರು.

ಇಲಿಚ್ ಸಂಗಡ ಮಾತುಕತೆಯಲ್ಲೂ ಜೆ.ಕೆ. ಇದನ್ನೇ ಹೇಳಿದರು. ಯಾವುದೇ 'ಪರಂಪರೆ'ಯಲ್ಲಿ ತನ್ನನ್ನು ಗುರುತಿಸಿಕೊಳ್ಳುವುದರಿಂದ ಮನುಷ್ಯ, ತನ್ನತನ ಕಳೆದುಕೊಳ್ಳುತ್ತಾನೆ. second hand ಆಗುತ್ತಾನೆ. ಇದು 'ತಿರುಳಿ'ನಿಂದ ದೂರ ಸರಿದಂತೆ ಎಂದು ಪ್ರತಿಪಾದಿಸಿದರು. ಇಲಿಚ್ ಇದನ್ನೊಪ್ಪಲಿಲ್ಲ. ಮಾನವ ಜೀವನವನ್ನು ರೂಪಿಸಿದ 'ಪರಂಪರೆ'ಯ ಮಹತ್ವವನ್ನು ಮನಗಾಣಿಸುವ ಪ್ರಯತ್ನವನ್ನಾತ ಮಾಡಿದ. 'ಪರಂಪರೆ' ಎಂದಾಗ ನಾವು ಮಾಡುವ ಸರಳವಾದ ಅರ್ಥವನ್ನಲ್ಲ, ಬೇರೆಯೇ ಒಂದು ಬೆಳಕಿನಲ್ಲಿ ನಾವು ಪರಂಪರೆಯನ್ನು ನೋಡಬೇಕಾಗಿದೆ. ಪರಂಪರೆ ಎಂದಾಗ ಮಾನವ ಜನಾಂಗ ನಡೆದುಬಂದ ದಾರಿಯ ಹೆಜ್ಜೆಗುರುತು. ಈ ನಡೆಯಲ್ಲಿ ಎಷ್ಟೋ ಎಡರು ತೊಡರುಗಳು; ಕೆಡುಕುಗಳು ಇದ್ದಿರಬಹುದು. ಇದನ್ನು ಒಪ್ಪಿಯೂ 'ಪರಂಪರೆ'ಯಲ್ಲಿ ತನ್ನನ್ನು ಗುರುತಿಸಿಕೊಳ್ಳಬೇಕಾದದ್ದು ಮನುಷ್ಯ ಪ್ರಜ್ಞೆಗೆ ಅಗತ್ಯವಾದದ್ದು. ನಾವೇ ಮಾಡಿದ ತಪ್ಪುಗಳನ್ನು ನಾವೇ ಒಪ್ಪುವುದು ಅಗತ್ಯವಲ್ಲವೆ; ಹಾಗೆ ಒಪ್ಪಿಯೇ ಮುಂದೆ ಸಾಗಬೇಕಲ್ಲವೇ?– ಎಂದು ವಾದಿಸಿದ.

ಇದು ಇಲಿಚ್ ಹೇಳಿದ್ದು: ' In that sense of belonging iam prepared to be second hand' 'ಜನಾಂಗದ ಅನುಭವ ತನ್ನದೂ ಆಗಿದೆ ಎಂದು ಗುರುತಿಸಿಕೊಂಡಲ್ಲಿ ತಾನು second hand ಆಗುವುದಾದರೆ – ಒಳ್ಳೆಯದು; ಹಾಗೇ ಆಗಲಿ'

ಇದು ಈ ಲೋಕಕ್ಕೆ; ಇಹಕ್ಕೆ; ಬದುಕಿಗೆ; ಮಾನವತೆಗೆ ಬದ್ಧನಾದವನ ಮಾತು. ಈ ಮಣ್ಣಿನಲ್ಲಿ ನಿಂತು, ದೇವತೆಗಳು ಕೇಳುವಂತೆ, ಗಟ್ಟಿಯಾಗಿ ಕೂಗಿಹೇಳಬೇಕಾದ ಮಾತು. ಆಧುನಿಕ ನಾಗರಿಕತೆಗೆ, ಅನಾಥ ಜಗತ್ತನ್ನು ರೂಪಿಸುತ್ತಿರುವ ಆಧುನಿಕ ನಾಗರಿಕತೆಗೆ ಈ ಮಾತು ಇlಿಚ್ ನ ಪ್ರತಿಕ್ರಿಯೆ ಕೂಡ.

ಆದರೆ ಇಲಿಚ್ ಮತ್ತು ಜೆ.ಕೆ. ಅವರ ಪರಸ್ಪರ ವಿರುದ್ಧವೆಂದು ಕಾಣುವ ಎರಡು ನಿಲುವುಗಳು ಒಂದೇ ಸತ್ಯದ ಎರಡು ಮುಖಗಳಂತೆ ಭಾಸವಾಗುತ್ತದೆ. ಇದೇ ದೊಡ್ಡ ಆಶ್ಚರ್ಯ. ಇದು ಹೇಗೆಂದರೆ:

ಸತ್ಯವನ್ನು ತಲಪಲು ದಾರಿಗಳಿಲ್ಲವೆಂದರೆ– ಎಲ್ಲ ದಾರಿಗಳೂ ಸತ್ಯದ ದಾರಿಗಳೇ ಎಂಬರ್ಥವನ್ನು ಇನ್ನೊಂದು ರೀತಿಯಲ್ಲಿ ಹೇಳಿದಂತಲ್ಲವೇ?

ಎಲ್ಲ ಆಯ್ಕೆಗಳನ್ನೂ ಮೀರಿದ ಎಚ್ಚರವೊಂದುಂಟು ಎಂದಾಗ–ಎಲ್ಲರ ಆಯ್ಕೆಗಳೂ ತನ್ನ ಆಯ್ಕೆಗಳೇ ಎಂದು ಆ ಎಚ್ಚರವು ಸೂಚಿಸಿದಂತಲ್ಲವೇ?

'ಸರ್ವಸಂಗ ಪರಿತ್ಯಾಗ'– ಅಂದರೆ ತಾನು ಯಾರವನೂ ಅಲ್ಲ ಎಂದಾಗ– ತಾನು ಎಲ್ಲರವನು ಎಂದಂತಲ್ಲವೇ?

ತಾನು ಎಲ್ಲರವನು ಎಂಬ ಸೂಚನೆ great sense of belonging ಅಲ್ಲವೆ?

ಮತ್ತು ತಾನು ಎಲ್ಲರವನಾಗಿಯೂ ಆಗಿಲ್ಲ, ತಾನು ತಾನೇ ಆಗಿಯೂ ತಾನು ಎಲ್ಲರವನಾಗಿರುವುದು ಸಾಧ್ಯ ಎಂಬ ಸ್ವ-ವರ್ಣನೆ ಮನುಷ್ಯರಲ್ಲಿ ಹೊಸ ಸಾಧ್ಯತೆಗಳತ್ತ ನೋಡುವಂತೆ ಮಾಡುವುದಿಲ್ಲವೆ?

ಅಂದಾಗ, ದಾರಿಗಳಿಲ್ಲ ಎಂಬ ಮಾತೇ ಹೊಸದಾರಿಯನ್ನು ಹುಡುಕು ಎಂದಂತಾಯಿತು!

■ ತೋಷ

## ಮಾತೇ ಮುತ್ತು

★ ನಿಮ್ಮ ಕೋಪಕ್ಕಾಗಿ ನಿಮ್ಮನ್ನು ಶಿಕ್ಷಿಸಲಾಗುವುದಿಲ್ಲ. ಆದರೆ ನಿಮ್ಮ ಕೋಪವೇ ನಿಮ್ಮನ್ನು ಶಿಕ್ಷಿಸುತ್ತದೆ.

-ಗೌತಮ ಬುದ್ಧ

★ ಭರವಸೆ ಎಂದರೆ ಎಚ್ಚೆತ್ತ ಕನಸು.

-ಅರಿಸ್ಟಾಟಲ್

★ ನಿಮ್ಮ ದಿಕ್ಕನ್ನು ಬದಲಿಸದಿದ್ದರೆ ನೀವು ಎಲ್ಲಿಂದ ಹೊರಟಿರೋ ಅಲ್ಲಿಗೇ ತಲುಪುವ ಸಾಧ್ಯತೆ ಇದೆ.

-ಲಾವೊ ತ್ಸು

★ ಮನುಷ್ಯ ಯಶಸ್ಸನ್ನು ಅನುಭವಿಸಬೇಕಾದರೆ ಕಷ್ಟಗಳನ್ನು ಎದುರಿಸಲೇಬೇಕು.

-ಡಾ.ಎ.ಪಿ.ಜೆ. ಕಲಾಂ

★ ಜನರ ಜೊತೆಗೆ ಹೇಗೆ ವರ್ತಿಸಬೇಕೆಂದು ತಿಳಿದುಕೊಳ್ಳುವುದೇ ಯಶಸ್ಸಿನ ಸೂತ್ರಗಳಲ್ಲಿ ಏಕೈಕ ಮುಖ್ಯ ಅಂಶ.

-ಥಿಯೊಡಾರ್ ರೂಸ್‌ವೆಲ್ಟ್

★ ಸರಿಯಾದ ಸಮಯದಲ್ಲಿ, ಸರಿಯಾದ ರೀತಿಯಲ್ಲಿ ಸರಿಯಾದದ್ದನ್ನು ಮಾಡಿ. ಯಶಸ್ಸು ಸುಲಭದಲ್ಲಿ ನಿಮ್ಮದಾಗುತ್ತದೆ.

-ಅರ್ನಾಲ್ಡ್ ಗ್ಲಾಸೊ

★ ಗಾಳಿಯ ದಿಕ್ಕನ್ನು ಬದಲಿಸಲು ನನ್ನಿಂದ ಸಾಧ್ಯವಿಲ್ಲ. ಆದರೆ ನನ್ನ ನಾವೆಯ ಚುಕ್ಕಾಣಿಯನ್ನು ಗುರಿ ತಲುಪಲು ಸಾಧ್ಯವಾಗುವಂತೆ ಬದಲಿಸುತ್ತೇನೆ.

-ಜಿಮ್ಮಿ ಡೀನ್

★ ಯಾರಾದರೊಬ್ಬರ ಮೋಡದಲ್ಲಿ ಕಾಮನಬಿಲ್ಲಾಗಲು ಪ್ರಯತ್ನಿಸಿ.

-ಮಾಯಾ ಆ್ಯಂಗೆಲೊ

★ ಅವಕಾಶಗಳು ಬಂದು ಬಡಿಯದಿದ್ದರೆ, ಅದಕ್ಕಾಗಿ ಒಂದು ಹೊಸ ಬಾಗಿಲನ್ನು ನಿರ್ಮಿಸಿ.

-ಮಿಲ್ಟನ್ ಬರ್ಲೆ

★ ಬೆಳಕನ್ನು ಪಸರಿಸಲು ಎರಡು ದಾರಿಗಳಿವೆ. ಮೊದಲನೆಯದ್ದು ನೀವೇ ದೀಪವಾಗುವುದು. ಅದಾಗದಿದ್ದಲ್ಲಿ ದೀಪದ ಮುಂದಿನ ಕನ್ನಡಿಯಾಗುವುದು.

-ಎಡಿತ್ ವ್ಹಾರ್ಟನ್

★ ನಿಮ್ಮ ಒಳಗಿನಿಂದಲೇ ನೀವು ಬೆಳೆಯಬೇಕು. ಯಾರೂ ನಿಮಗೆ ಕಲಿಸಲಾಗುವುದಿಲ್ಲ. ಯಾರೂ ನಿಮ್ಮನ್ನು ಆಧ್ಯಾತ್ಮಿಯಾಗಿಸಲಾರರು. ಅದೇನಿದ್ದರೂ ನಿಮ್ಮ ಒಳಗಿನ ಆತ್ಮದ ಕೆಲಸ.

-ಸ್ವಾಮಿ ವಿವೇಕಾನಂದ

★ ನಿಮ್ಮ ಜೀವನದಲ್ಲಿ ಎರಡು ಮಹತ್ವದ ದಿನಗಳಿವೆ. ಒಂದು ನೀವು ಹುಟ್ಟಿದ ದಿನ. ಇನ್ನೊಂದು ನೀವು ಹುಟ್ಟಿದ್ದೇಕೆ ಎಂದು ತಿಳಿದುಕೊಂಡ ದಿನ.

-ಮಾರ್ಕ್ ಟ್ವೇನ್